


# ಮಹಾಗುರುವಿನ ಬೇಸರದ ಅಧ್ಯಾಯ

■ ವಿಶಾಖ ಎನ್.

**ಸಿಂಧು ಹೈದರಾಬಾದಿನ ಹುಡುಗಿ. ಸೈನಾ ಹರಿಯಾಣದ ಬೆಡಗಿ. ಇಬ್ಬರೂ ಬ್ಯಾಡ್ಮಿಂಟನ್‌ಗೆ ಘನತೆ ತಂದುಕೊಟ್ಟವರೇ. ‘ಡ್ರೀಮ್ಸ್ ಆಫ್ ಎ ಬಿಲಿಯನ್: ಇಂಡಿಯಾ ಅಂಡ್ ದಿ ಒಲಿಂಪಿಕ್ ಗೇಮ್ಸ್’ ಕೃತಿಯಲ್ಲಿನ ಕೆಲವು ವಿವರಗಳ ಮೂಲಕ ಗೋಪಿಚಂದ್ ಅವರನ್ನೊಳಗೊಂಡ ಸಮಕಾಲೀನ ಭಾರತೀಯ ಬ್ಯಾಡ್ಮಿಂಟನ್ ಲೋಕ ಸುದ್ದಿಯಲ್ಲಿದೆ.**

ಬ್ಯಾಡ್ಮಿಂಟನ್ ಕನಸು ಕಂಗಳ ಹೆಣ್ಣುಮಕ್ಕಳೀಗ ತಂತಮ್ಮ ಕಣ್ಣುಗಳನ್ನು ಇನ್ನಷ್ಟು ಅರಳಿಸಿರಲಿಕ್ಕೆ ಸಾಕು. ಸೈನಾ ನೆಹ್ವಾಲ್ ಹೆಸರನ್ನೀಗ ಪುಲ್ಲೆಲಾ ಗೋಪಿಚಂದ್ ಸ್ಮರಿಸಿಕೊಂಡಿರುವ ರೀತಿಯಿಂದ ಆ ಅರಳುವಿಕೆ. ‘ಡ್ರೀಮ್ಸ್ ಆಫ್ ಎ ಬಿಲಿಯನ್: ಇಂಡಿಯಾ ಅಂಡ್ ದಿ ಒಲಿಂಪಿಕ್ ಗೇಮ್ಸ್’ ಎಂಬ ಕೃತಿಯೊಂದು ಇದೇ ತಿಂಗಳ ಮೂರನೇ ವಾರ ಪುಸ್ತಕದ ಶೆಲ್ಫ್‌ಗಳನ್ನು ತಲುಪುವ ಸಮಯ. ಕ್ರೀಡಾ ಇತಿಹಾಸಕಾರ ಬೋರಿಯಾ ಮಜುಂದಾರ್ ಹಾಗೂ ಹಿರಿಯ ಪತ್ರಕರ್ತ ನಳಿನ್ ಮೆಹ್ತಾ ಜೊತೆಗೂಡಿ ಬರೆದಿರುವ ಕೃತಿಯ ‘ಬಿಟರ್ ರೈವಲ್ರಿ’ ಎಂಬ ಅಧ್ಯಾಯ ಕೆಲ ದಿನಗಳಿಂದ ಸದ್ದು ಮಾಡಿದೆ. ಸೈನಾ ಹೈದರಾಬಾದ್‌ನ ತಮ್ಮ ಬ್ಯಾಡ್ಮಿಂಟನ್ ಅಕಾಡೆಮಿಯನ್ನು ತೊರೆದು ಬೆಂಗಳೂರಿನ ಪ್ರಕಾಶ್ ಪಡುಕೋಣೆ ಅಕಾಡೆಮಿಯತ್ತ ಹೊರಟ ಗಳಿಗೆಯನ್ನು ಗೋಪಿಚಂದ್ ಹೆಚ್ಚೇ ಭಾವುಕರಾಗಿ ಆ ಅಧ್ಯಾಯದಲ್ಲಿ ವಿಷಾದ ಬೆರೆತ ಧಾಟಿಯಲ್ಲಿ ಬರೆದಿದ್ದಾರೆ. ಆ ಅಧ್ಯಾಯದ ಹೂರಣವನ್ನು ಆಮೇಲೆ ನೋಡೋಣ. ಅದಕ್ಕೂ ಮೊದಲು ಸೈನಾ ಆಟಪ್ರೀತಿಯ ಮೇಲೊಮ್ಮೆ ಕಣ್ಣಾಡಿಸೋಣ.

ಹರಿಯಾಣದ ಹಿಸಾರ್‌ನಲ್ಲಿ ಹುಟ್ಟಿ, ಬಾಲ್ಯದಲ್ಲೇ ಅಪ್ಪ–ಅಮ್ಮನ ಬ್ಯಾಡ್ಮಿಂಟನ್ ಆಟವನ್ನು ಕಂಡುಂಡು ಬೆಳೆದ ಹುಡುಗಿ ಸೈನಾ. ಅಮ್ಮ ಉಷಾರಾಣಿ ರಾಜ್ಯಮಟ್ಟದ ಬ್ಯಾಡ್ಮಿಂಟನ್ ಆಟಗಾರ್ತಿ. ಮಗಳು ಅದೇ ಆಟದಲ್ಲಿ ರಾಷ್ಟ್ರಮಟ್ಟದ ಆಟಗಾರ್ತಿಯಾಗಬೇಕು